MMR MEDIA Since 1975

# MANGALORE MARKET REPORTS

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 ENGLISH DAILY Subscription Yearly - Rs. - FRIDAY 1-4-2022

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## ರಷ್ಯಾದಿಂದ ಭಾರತ ದಾಖಲೆ ಪ್ರಮಾಣದಲ್ಲಿ ಸೂರ್ಯಕಾಂತಿ ಎಣ್ಣೆ ಖರೀದಿ

ಭಾರತ ರಷ್ಯಾದಿಂದ ಎಪ್ರಿಲ್ ತಿಂಗಳ ಆಮದಿಗೆ ರಷ್ಯಾದಿಂದ 45000 ಟನ್ ಸೂರ್ಯಕಾಂತಿ ಎಣ್ಣೆ ಖರೀದಿ ಒಡಂಬಡಿಕೆ ಮಾಡಿಕೊಂಡಿದೆಯೆನ್ನಲಾಗಿದೆ. ಉಕ್ರೈನ್ ನಿಂದ ಆಮದು ನಿಂತ ಮೇಲೆ ಸ್ಥಳೀಯ ಮಾರುಕಟ್ಟೆಗಳಲ್ಲಿ ಸೂರ್ಯಕಾಂತಿ ಎಣ್ಣೆ ದರ ಗಣನೀಯ ಹೆಚ್ಚಳವಾಗಿದೆ. ದಕ್ಷಿಣ ಅಮೇರಿಕಾ ದೇಶಗಳಲ್ಲಿ ಸೋಯಾಬೀನ್ ಎಣ್ಣೆ ಉತ್ಪಾದನೆ ಇಳಿಕೆಯಿಂದ ಪಾಮೆಣ್ಣೆ ದರಗಳ ಹೆಚ್ಚಳದಿಂದ ಭಾರತೀಯ ಮಾರುಕಟ್ಟೆಯಲ್ಲಿ ಖಾದ್ಯತೈಲ ದರ ಗಣನೀಯ ಹೆಚ್ಚಳ ಕಂಡಿದೆ. ಸೂರ್ಯಕಾಂತಿ ಎಣ್ಣೆ ಆಮದಿನಿಂದ ಖಾದ್ಯತೈಲ ಪೂರೈಕೆ ಉತ್ತಮಗೊಳ್ಳಬಹುದಾಗಿದೆ.

## ತೊಗರಿ, ಉದ್ದು ಆಮದು ಮಾರ್ಚ 31, 2023 ತನಕ ನಿರ್ಬಂಧ ಮುಕ್ತ

ತೊಗರಿ ಮತ್ತು ಉದ್ದು, ಮಾರ್ಚ 31, 2023 ರ ತನಕ ಯಾವುದೇ ನಿರ್ಬಂಧವಿಲ್ಲದೆ ಆಮದು ಮಾಡಲು ಕೇಂದ್ರ ಸರಕಾರ ಅವಕಾಶ ಕೊಟ್ಟಿದೆ. ತೊಗರಿ, ಉದ್ದು ಹಾಗೂ ಅವುಗಳ ಬೇಳೆ ದೇಶೀ ಮಾರುಕಟ್ಟೆಯಲ್ಲಿ ಸಾಕಷ್ಟು ಲಭಿಸುವಂತಾಗಲು ಈ ನಿರ್ಧಾರ ಹೊಂದಲಾಗಿದೆಯೆನ್ನಲಾಗಿದೆ.